


International Journal of Kannada Research
www.kannadajournal.com

**ISSN: 2454–5813**
IJKR 2019; 5(2): 88-92
© 2019 IJKR
www.kannadajournal.com
Received: 19-02-2019
Accepted: 21-03-2019

**ಡಾ. ಗುರುರಾಜ ಎಸ್**
ನವಲಗುಂದ, ಎಸ್.ಜೆ.ಎಂ.ವಿ.ಎಸ್.
ಕಲಾ ಮತ್ತು ವಾಣಿಜ್ಯ, ಮಹಿಳಾ
ಮಹಾವಿದ್ಯಾಲಯ, ಹುಬ್ಬಳ್ಳಿ

**Correspondence**
**ಡಾ. ಗುರುರಾಜ ಎಸ್**
ನವಲಗುಂದ, ಎಸ್.ಜೆ.ಎಂ.ವಿ.ಎಸ್.
ಕಲಾ ಮತ್ತು ವಾಣಿಜ್ಯ, ಮಹಿಳಾ
ಮಹಾವಿದ್ಯಾಲಯ, ಹುಬ್ಬಳ್ಳಿ

# ಕಲ್ಯಾಣ ಚಾಲುಕ್ಯರ ಕಾಲದ ಶೈವಧರ್ಮ

**ಡಾ. ಗುರುರಾಜ ಎಸ್**

ಭಾರತದ ಪ್ರಾಚೀನ ಧರ್ಮಗಳಲ್ಲಿ ಶೈವಧರ್ಮವು ಒಂದು. ವೇದಪೂರ್ವ ಹರಪ್ಪ–ಮೊಹೆಂಜೊದಾರೊ ಕಾಲದಿಂದಲೂ ಅವ್ಯಾಹತವಾಗಿ ಸಾಗಿ ಬಂದ ಶಿವೋಪಾಸನೆ ಈ ಅವಧಿಯಲ್ಲಿಯೂ ನಾನಾ ಬಗೆಗಳಲ್ಲಿ ಬೆಳೆದುಬಂದಿದೆ. ಋಗ್ವೇದದಲ್ಲಿ ಕಾಣಿಸಿಕೊಳ್ಳುವ ರುದ್ರ ಕ್ರಮೇಣ ಶಿವನಾಗಿ ಶೈವಧರ್ಮೀಯರಿಗೆ ಆರಾಧ್ಯದೈವವಾಗಿ ಬೆಳೆದ. ಶಿವನನ್ನು ಲಿಂಗರೂಪವಾಗಿಯೂ ಆರಾಧಿಸುವ ರೂಢಿ ಬೆಳೆದುಬಂದಿದೆ. ಶಿವೋಪಾಸನೆಗಳಿಗೆ ಆಧಾರಗಳಾದ ಶಿವಾಗಮಗಳನ್ನು ಶಿವನೇ ಪಾರ್ವತಿಗೆ ಉಪದೇಶಿಸಿದನೆಂಬ ನಂಬಿಕೆ ಇದೆ. ಅವುಗಳ ಸಂಖ್ಯೆ ಇಪ್ಪತ್ತೆಂಟು ಎಂದು ಹೇಳಲಾಗುತ್ತದೆ. ಕಾಲದ ಪ್ರವಾಹದಲ್ಲಿ ವೇದಗಳ, ಆಗಮಗಳ ಅಭಿಪ್ರಾಯಗಳು ಒಂದರೊಡನೊಂದು ಬೆರೆತು ಶಿವೋಪಾಸನೆಯಲ್ಲಿ ವಿಶಿಷ್ಟ ಸಂಕೀರ್ಣತೆ ತಲೆದೋರಿದೆ. ಶಿವೋಪಾಸನಾ ಮಾರ್ಗದ ಇನ್ನೊಂದು ಹೆಸರು ಪಾಶುಪತ ಧರ್ಮ. ಅದು ಮಹಾಭಾರತದ ಶಾಂತಿಪರ್ವದಲ್ಲಿ ಉಕ್ತವಾಗಿದೆ(ಹಿಸ್ಟರಿ ಆ್ಯಂಡ್ ಫಿಲಾಸಫಿ ಆಫ್ ಲಿಂಗಾಯತ ರಿಲಿಜಿಯನ್: ಸಾಖರೆ ಎಂ.ಆರ್. ಪುಟ ೨೧೨).

ಇಂದು ಶೈವ ಎಂದು ಕರೆಯಲಾಗುವ ಧರ್ಮದ ಒಳಹೊರಗುಗಳ ವ್ಯತ್ಯಾಸಗಳು, ಅದು ಐತಿಹಾಸಿಕವಾಗಿ ಬೆಳೆದು ಅನೇಕ ವಿಭಿನ್ನ ಅಂಶಗಳನ್ನು ತನ್ನದಾಗಿಸಿಕೊಂಡ ಧರ್ಮ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶೈವಧರ್ಮವು ಏಷ್ಯಾದ ಅತಿ ಪ್ರಾಚೀನ ಧರ್ಮಗಳಲ್ಲೊಂದು. ಈ ಶೈವದ ಆಚರಣೆಯನ್ನು ನಾವು ಕ್ರಿಸ್ತಪೂರ್ವದಲ್ಲಿ ಗುರುತಿಸಬಹುದಾಗಿದೆ. ಶೈವಧರ್ಮದ ಮೂಲವನ್ನು ನಾವು ಋಗ್ವೇದಲ್ಲಿ ಬರುವ 'ಶಿಶ್ನದೇವ'(ಋಗ್ವೇದ ಸಂಹಿತಾ ೨.೨೧.೫; ೧೦. ವೆಂಕಟರಾವ್ ಎಚ್.ಪಿ.–೯೯.೩) ಎಂದು ತಿಳಿದಿದೆ. ಈ ಶಿಶ್ನ ಪದದ ಅರ್ಥವನ್ನು ನಾವು ಲಿಂಗವೆಂದು ಪರಿಭಾವಿಸಬಹುದಾಗಿದೆ. ಅಲ್ಲದೆ ಮೂಲದಲ್ಲಿ 'ಯೋನಿ'ಪೂಜೆ ಎಂಬುದನ್ನು ಗುರುತಿಸಿದರೆ ಎಲ್ಲದಕ್ಕೂ ಮೂಲ ಪ್ರಕೃತಿ. ಪ್ರಕೃತಿ(ಸ್ತ್ರೀ) ಮೂಲವಾದ ಈ ಯೋನಿ ಆರಾಧನೆಯ ಉದ್ದೇಶ ನಾಗರಿಕತೆ ಬೆಳವಣಿಗೆಯ ಮೂಲದಲ್ಲಿ ಗುರುತಿಸಬಹುದಾಗಿದೆ. ಯೋನಿಪ್ರಧಾನವಾಗಿದ್ದ ಸಂದರ್ಭದಲ್ಲಿ ಸ್ತ್ರೀಗೆ ಹೆಚ್ಚಿನ ಗೌರವ ದೊರೆಯುತ್ತಿದ್ದು, ನಂತರದ ಕಾಲದಲ್ಲಿ ಯೋನಿಯನ್ನು ಪೀಠವನ್ನಾಗಿಸಿಕೊಂಡು ಪುರುಷನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಅಲ್ಲಿಂದ 'ಯೋನಿಯೊಂದಿಗೆ ಶಿಶ್ನ'ವನ್ನು ಪೂಜಿಸುವ ಪದ್ಧತಿ ಜಾರಿಗೊಂಡ ನಂತರದಲ್ಲಿ 'ಲಿಂಗ' ರೂಪದಲ್ಲಿ ಕಾಣಲು ಪ್ರಾರಂಭಿಸಿದರು. ಇದರಿಂದ ಸಿಂಧೂ ನಾಗರಿತೆಯ ಸಂದರ್ಭದಲ್ಲಿ ದೊರೆತಿರುವ 'ಲಿಂಗ' ಸಾದೃಶ ವಸ್ತುಗಳು ಅವುಗಳಾಗಿದ್ದವೇ ಎಂಬುದು ಊಹೆಗೆ ಅವಕಾಶವಾಗಿದೆ. ಕಾಲಿಬಂಗಾನ್(ರಾಜಸ್ತಾನ) ನೆಲೆಯಲ್ಲಿ ಸುಟ್ಟ ಮಣ್ಣಿನ ಯೋನಿಪೀಠ ಸಹಿತ 'ಲಿಂಗ'(ದಿ ಸರಸ್ವತಿ ಫ್ಲೋಸ್ ಅನ್ ದಿ ಕಂಟಿನ್ಯೂಟಿ ಆಫ್ ಇಂಡಿಯನ್ ಕಲ್ಚರ್, ಲಾಲ್ ಬಿ.ಬಿ.: ಪುಟ ೧೧೮) ದೊರೆತಿದೆ. ಇದು ಲಿಂಗಾರಾಧನೆಯ ಪ್ರಾಚೀನತೆಯನ್ನು ಸ್ಪಷ್ಟವಾಗಿ ಸಿಂಧೂ ನಾಗರಿಕತೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಹರಪ್ಪ–ಮೊಹೆಂಜೊದಾರೋಗಳಲ್ಲಿ ನಡೆದ ಉತ್ಖನನದಲ್ಲಿ ಕ್ರಿಸ್ತ ಪೂರ್ವ ಸುಮಾರು ೩೨೫೦ರ ಸೈಂಧವ ಸಂಸ್ಕೃತಿಯಲ್ಲಿನ ಕೊಂಬುಗಳಿರುವ ಹಾಗೂ ಮೂರು ಮುಖಗಳಿರುವ ದೇವತೆಯ ವಿಗ್ರಹ ದೊರೆತಿರುವುದು ಕಂಡುಬರುತ್ತದೆ. ಆ ವಿಗ್ರಹವು ಯೋಗ ಸಮಾಧಿಯ ಭಂಗಿಯಲ್ಲಿ ಕುಳಿತಿರುವುದು, ವಿಗ್ರಹದ ಕೆಳ ಪೀಠದ ಸುತ್ತ ಆನೆ, ಹುಲಿ, ಖಡ್ಗಮೃಗ, ಎಮ್ಮೆ, ಜಿಂಕೆಗಳು ಇರುವುದನ್ನು ಗುರುತಿಸಿದ ಸರ್ ಜಾನ್ ಮಾರ್ಷಲ್ ಅವರು ಇದು ಸಿಂಧೂ ನಾಗರಿಕತೆಯಲ್ಲಿ ಪೂಜಿಸಲ್ಪಡುತ್ತಿದ್ದ ಪಶುಪತಿಯ ಪ್ರಾಚೀನ ರೂಪವೆಂದು ಅಭಿಪ್ರಾಯಪಡುತ್ತಾರೆ (ಮೊಹೆಂಜೊದಾರೊ ಆ್ಯಂಡ್ ದಿ ಇಂಡಸ್ ಸಿವಿಲೈಜೇಷನ್; ಸರ್ ಜಾನ್ ಮಾರ್ಷಲ್: ಪುಟ ೫೨–೪.). ಸಿಂಧೂ ನಾಗರಿಕತೆಯ ಈ ಮುದ್ರೆಯಲ್ಲಿ ಕಂಡುಬರುವ 'ಪಶುಪತಿ'ಯು ಇನ್ನೊಂದು ದೃಷ್ಟಿಯಿಂದ ಕೂಡ ಗಮನೀಯವಾಗಿದೆ.

ಈ ಪಶುಪತಿಯು ಕುಳಿತಿರುವ ರೀತಿಯು ಯೋಗಿಯನ್ನು ನೆನಪಿಸುತ್ತದೆ. ಹೀಗೆ ಶೈವಧರ್ಮಕ್ಕೆ ಸಂಬಂಧಿಸಿದ ಕೆಲವೊಂದು ಅಂಶಗಳನ್ನು ಸಿಂಧೂ ನಾಗರಿಕತೆಯಲ್ಲಿ ಗುರುತಿಸಲು ಸಾಧ್ಯವಾಗಿದೆ. ಇದು ಇತ್ತೀಚಿನ ವೈಜ್ಞಾನಿಕವಾಗಿ ಕಾಲ ನಿರ್ಣಯದ ವಿಧಾನಗಳ ಸಹಾಯದಿಂದ ತಿಳಿಯುತ್ತದೆ. ಸಿಂಧೂ ನಾಗರಿಕತೆಯಲ್ಲಿ ಮೂಲ ಅಧಿದೇವತೆಯಾಗಿದ್ದ ಶಿವ, ವೈದಿಕ ಸಾಹಿತ್ಯದ ಅತಿ ಪ್ರಾಚೀನ ಭಾಗವೆಂದು ಪರಿಗಣಿಸಲ್ಪಟ್ಟಿರುವ 'ಋಗ್ವೇದ ಸಂಹಿತೆ'ದಲ್ಲಿ ಬರುವ ಮೂರು ಸೂಕ್ತಗಳು 'ರುದ್ರ'ನ ಕುರಿತಾಗಿದ್ದು, ಅವುಗಳಲ್ಲಿ ಸುಮಾರು ೭೫ ಸಲ ರುದ್ರನನ ಬಗ್ಗೆ ಉಲ್ಲೇಖಿಸಲಾಗಿದೆ(ಋಗ್ವೇದ ಸಂಹಿತಾ: ವೆಂಕಟರಾವ್ ಎಚ್.ಪಿ.; ಪುಟ ೫೮೯). ರುದ್ರನು ದುಷ್ಟಶಕ್ತಿಗಳಿಗೆ ಅಧಿಪತಿಯೆಂಬಂತೆ ಚಿತ್ರಿತನಾಗಿದ್ದಾನೆ. ರುದ್ರ ಎಂದರೆ ಗರ್ಜಿಸುವವನು ಎಂದು ಅರ್ಥ ಹೊಮ್ಮುತ್ತದೆ.

ರುದ್ರನನ್ನು ಇತ್ತಿಚೀನ ಕಾಲದಲ್ಲಿ ಅರಗಿಸಿಕೊಳ್ಳಲಾಗದಷ್ಟು ರೀತಿಯಲ್ಲಿ ಅವನಿಗೆ ಅನೇಕ ಲಕ್ಷಣಗಳನ್ನು ಸೇರಿಸಿದ್ದಾರೆ. ಅದು ರುದ್ರನು ಪರ್ವತಗಳಲ್ಲಿ ವಾಸಿಸುವವನು ; ಜಟೆಯನ್ನು ಎತ್ತಿಕಟ್ಟಿದ್ದಾನೆ. ಚರ್ಮವನ್ನು ಧರಿಸಿದ್ದಾನೆ. ಸ್ವಭಾವತಃ ಭಯಂಕರನಾದವನು ಎಂದು ಹೇಳಿದ್ದಾರೆ(ದಿ ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಹಿರಿಯಣ್ಣ ಎಂ: ಪುಟ ೩೩). ಋಗ್ವೇದ ಸಂಹಿತೆಯಲ್ಲಿ ಬರುವ ರುದ್ರನಿಗೆ ತದನಂತರದ ಕಾಲದಲ್ಲಿ 'ರುದ್ರ ಮತ್ತು ಶಿವ'ನಿಗೆ ಹೆಚ್ಚಿನ ಸಾಮ್ಯತೆಯನ್ನು ಹುಟ್ಟಿಸುವುಂತ ಅನೇಕ ಚಟುವಟಿಕೆಗಳು ಜರುಗಿವೆ. ಒಂದು ಪದ್ಯದಲ್ಲಿ ಅವನಿಗೆ 'ವೃಷಭ'(ಋಗ್ವೇದ ಭಾಗ–೫, ವೆಂಕಟರಾವ್ ಎಚ್.ಪಿ., ೨.೩೩.೭: ೨.೩೩.೧೫) ಎಂಬುದಾಗಿಯೂ ಹೇಳಲಾಗಿದೆ. ಈ ವೃಷಭ(ರುದ್ರ)ನಿಗೆ ಸಾಯಣರು ಇದಕ್ಕೆ ಕೆಲವು ಕಡೆ ಕಾಮವರ್ಷಕ ಎಂಬರ್ಥವನ್ನು ನೀಡಿದ್ದಾರೆ. ಇನ್ನೊಂದು ಸೂಕ್ತದಲ್ಲಿ ಮೀಢ್ವ (ಪೂರ್ವೋಕ್ತ: ೧.೧೪.೧೩) ಎಂಬುದಾಗಿ ಸಂಬೋಧಿಸಲಾಗಿದೆ. ವೃಷಭ ಎಂಬುದು ಪೌರುಷದ ಪ್ರತೀಕವಾಗಿದೆ. ಈ 'ಮೀಢ್ವ' ಎಂದರೆ ನಿತ್ಯ ತಾರುಣ್ಯವನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಇರಬೇಕು, ಶಿವನನ್ನು ಊರ್ಧ್ವಲಿಂಗಿಯಾಗಿ ತೋರಿಸುವ ಪರಂಪರೆ ಶೈವಧರ್ಮದ ಮೂಲವನ್ನು ಆಗಮಗಳಲ್ಲಿ ಗುರುತಿಸಿರುವಂತೆ ತೋರುತ್ತದೆ.

ಇಲ್ಲಿ ರುದ್ರನು ಶತ್ರುನಾಶಕನಾಗಿದ್ದಾನೆ. ಅವನು ಗೋಹನ ಮತ್ತು ಪುರುಷರನ್ನು ವಧಿಸುವ ಸಾಧನವಾದ ಆಯುಧಗಳು ನಮ್ಮಿಂದ ದೂರವಿರಲಿ ಎಂದು ಹೇಳುತ್ತಾನೆ. ಪಶುಪತಿಯನ್ನು 'ಸದಾಶಿವ' ಎಂದು ಕರೆಯಲಾಗುವುದು, ಈ ಪಶುಪತಿಯು 'ಭವ' ಮತ್ತು 'ರುದ್ರ'ಗಳೆಂಬ ಬಾಣಗಳಿಂದ ಆವಿರ್ಭವಿಸಿದ್ದಾನೆ(ಪೂರ್ವೋಕ್ತ,; ಭಂಡಾರಕರ್ ಆರ್.ಜಿ., ಪುಟ. ೧೪೯). ಶಿವನನ್ನು ಭೂತಪತಿ(ಆತ್ಮಗಳ ದೇವತೆ) ಪಶುಪತಿ(ಜೀವಿಗಳ ದೇವತೆ) ಎಂದು ಕರೆಯಲಾಗುತ್ತದೆ. ರುದ್ರನು ಪೃಥ್ವಿ ಮತ್ತು ಅಂತರಿಕ್ಷಗಳಿಗೆ ಒಡೆಯ ಎಂದು ಹೇಳಲಾಗಿದೆ. ಅಥರ್ವಣ ವೇದದಲ್ಲಿ ಆಕಳು, ಕುದುರೆ, ಮನುಷ್ಯ, ಆಡು ಮತ್ತು ಕುರಿ ಈ ಐದು ಪ್ರಾಣಿಗಳು ಪಶುಪತಿಗೆ ಸೇರಿದವುಗಳಾಗಿವೆ(ಪೂರ್ವೋಕ್ತ; ಭಂಡಾರಕರ್ ಆರ್.ಜಿ., ಪುಟ. ೧೪೮) ಎಂದು ಉಲ್ಲೇಖಿಸಲಾಗಿದೆ.

ಸಾಮಾಜಿಕ ಸ್ತರದಲ್ಲಿ ಶೈವಧರ್ಮವು ಉಗಮ ಹಾಗೂ ಅದರ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನೆಲ್ಲವನ್ನು ಪಡೆದುಕೊಂಡಿತ್ತು. ಜೊತೆಗೆ ಹಲವು ಶಾಖೆಗಳನ್ನು ಹೊಂದಿರುವುದನ್ನು ಗುರುತಿಸಬಹುದು. ಯಾಮುನಾಚಾರ್ಯನ ಆಗಮಪ್ರಾಮಾಣ್ಯದಲ್ಲಿ ಶೈವ, ಪಾಶುಪತ, ಕಾಪಾಲಿಕ, ಕಾಳಾಮುಖರನ್ನು(ಯಸಸ್ತಿಲಕ ಆ್ಯಂಡ್ ಇಂಡಿಯನ್ ಕಲ್ಚರ್: ಪುಟ ೨೩೪) ಹೆಸರಿಸಲಾಗಿದೆ. ಶಂಕರ ಬ್ರಹ್ಮಸೂತ್ರ ಭಾಷ್ಯದ ಮೇಲೆ ವ್ಯಾಖ್ಯಾನ ಮಾಡುತ್ತಾ ವಾಚಸ್ಪತಿಯು ತನ್ನ ಭಾಮತಿಯಲ್ಲಿ ಶೈವ, ಪಾಶುಪತ, ಕಾರಣಿಕ ಸಿದ್ಧಾಂತಿ, ಕಾಪಾಲಿಕರನ್ನು ಹೆಸರಿಸುತ್ತಾನೆ. ರಾಮಾನುಜರು ಕಾಪಾಲ, ಕಾಳಾಮುಖ, ಪಾಶುಪತ, ಸೋಮ ಮತ್ತು ಭೈರವರನ್ನು ಸೂಚಿಸುತ್ತಾರೆ. ಬ್ರಹ್ಮಶಿವ(ಸಮಯಪರೀಕ್ಷೆ: ೧೪. ೫೦ ಪದ್ಯಗಳು)ನು ಕಾಳಾಮುಖ, ಕಾಪಾಲ, ಪಾಶುಪತ ಮತ್ತು ಶೈವರನ್ನು ಹೆಸರಿಸಿದ್ದಾನೆ. ಚನ್ನಬಸವಣ್ಣನವರು ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖ, ಪಾಶುಪತಿ ಇವರು 'ಷಡ್ದರ್ಶನದ ಶೈವ ಕರ್ಮಿ'ಗಳು(ಶ್ರೀ ಚನ್ನಬಸವಣ್ಣನರವರ ವಚನಗಳು, ಪುಟ ೧೯, ೨೫, ೩೩) ಎಂದು ಹೇಳಿದ್ದಾರೆ.

ಶೈವಧರ್ಮವು ಕ್ರಿಸ್ತಶಕ ೧೦ನೆಯ ಶತಮಾನದಲ್ಲಿಯೇ ಒಂದು ಪಂಥವಾಗಿ ಕಂಡುಬರುತ್ತದೆ. ಕರ್ನಾಟಕ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇದರ ಅಸ್ತಿತ್ವವನ್ನು ಗುರುತಿಸಬಹುದಾಗಿದೆ. ಕಲ್ಯಾಣ ಚಾಲುಕ್ಯರ ಕಾಲಘಟ್ಟಕ್ಕಾಗಲೇ ಹಲವು ಸ್ಥಿತ್ಯಂತರಗಳಿಂದ ಜನಪದರ ಧರ್ಮವಾಗಿ ಶೈವವು ರೂಪಾಂತರಗೊಂಡಿರುವುದು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರು ರಾಜ್ಯ ಸ್ಥಾಪನೆ ಮಾಡಿದ ನಂತರದಲ್ಲಿ ಬಹುತೇಕ ವೈಷ್ಣವ ಮತ್ತು ಶೈವ ಧರ್ಮಗಳೆರಡಕ್ಕೂ ಸಮಾನ ಪ್ರಾಧಾನ್ಯತೆ ನೀಡಿರುವುದು ಕಂಡುಬರುತ್ತದೆ. ಆದಾಗ್ಯೂ ಅವರ ಕಾಲದಲ್ಲಿ ಕಾಳಾಮುಖ, ಲಾಕುಳ ಹಾಗೂ ಪಾಶುಪತ ಶೈವ ಸಿದ್ಧಾಂತಗಳು ಬಹು ಜನಪ್ರಿಯಗೊಂಡು ಅಂದಿನ ಸಮಾಜದಲ್ಲಿ ಅತ್ಯಂತ ಪ್ರಭಾವಕಾರಿಯಾದಂತಹ ಸ್ಥಾನವನ್ನು ಹೊಂದಿದ್ದವು. ಸಾಂಸ್ಕೃತಿಕ ಜೀವನದಲ್ಲಿ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಇವರ ಪ್ರಮುಖ ಪಾತ್ರವಿತ್ತು. ದೇವಾಲಯಗಳ ಸ್ಥಾನಪತಿಗಳಿಗಾಗಿ ಮಠಗಳನ್ನು ಸ್ಥಾಪಿಸಿ ವಿದ್ಯಾರ್ಜನೆಗೈಯುತ್ತಿದ್ದರು. ಈ ಕಾಲದಲ್ಲಿ ನಿರ್ಮಾಣವಾದಂತಹ ದೇವಾಲಯಗಳಲ್ಲಿ ಪರಿವಾರ ದೇವತೆಗಳ ಪರಿಕಲ್ಪನೆ ಇದರ ಅಂಗವಾಗಿ ತ್ರೈಪುರುಷ ದೇವರುಗಳ ಪ್ರತಿಷ್ಠಾಪನೆ ಜೊತೆಗೆ ಸೌರರಾಧನೆಗೆ ವಿಶೇಷ ಒತ್ತು ದೊರೆತವು. ಇದರೊಂದಿಗೆ ಶೈವದ ಮತದ ನವಚೈತ್ರಯಾತ್ರೆ ಕಲ್ಯಾಣ ಚಾಲುಕ್ಯರು ಪೂರಕ ವಾತಾವರಣವನ್ನು ನಿರ್ಮಿಸಿಕೊಟ್ಟರೆಂದೆ ಹೇಳಬೇಕಾಗುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳನ್ನು ಒಟ್ಟಾರೆಯಾಗಿ ನೋಡಿದಾಗ ಅವರು ಅಧಿಕಾರಕ್ಕೆ ಬಂದ ತರುವಾಯ ಹಲವು ಶೈವ ದೇವಾಲಯಗಳನ್ನು ನಿರ್ಮಿಸಿರುವುದು ಅವರ ರಾಜ್ಯದ ಉದ್ದಗಲಕ್ಕೂ ದೊರೆಯುತ್ತವೆ. ವಿಶೇಷವಾಗಿ ಕಲ್ಯಾಣ ಚಾಲುಕ್ಯರ ಪ್ರಮುಖ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನಗಳು ಹೆಚ್ಚಾಗಿ ಶೈವಧರ್ಮವನ್ನು ಕುರಿತು ಹೇಳುತ್ತವೆ.

ಕಲ್ಯಾಣ ಚಾಳುಕ್ಯರ ರಾಜಕೀಯ ಮೂಲಭೂಮಿಯ ಪ್ರದೇಶಗಳಾದ ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಭಾಗಗಳಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯಗಳಿಗೆ ಸಾಕಷ್ಟು ವಿವರಗಳನ್ನು ಒದಗಿಸದೆ. ಈ ಭಾಗದ ಕಾಳಗಿ, ಸೇಡಂ, ಜಲಸಂಗ್ವಿ, ನಾಗಾಯಿ, ಮರ್ತೂರು, ಇಜೇರಿ, ಕುಳಗೇರಿ, ಗೋಗಿ, ರುದ್ರವಾಡಿ, ಬಸವಕಲ್ಯಾಣ, ಯಲಬುರ್ಗಿ ತಾಲ್ಲೂಕಿನ ಇಟಗಿ(ಮಹದೇವ ದೇವಾಲಯ) ಮೊದಲಾದ ಸ್ಥಳಗಳು ಆ ಕಾಲದ ಪ್ರಮುಖ ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಕ್ರಿ.ಶ. ೧೦೮೮(ಎ.ಆರ್.ಐ.ಇ. ೧೯೬೦–೬೧ ಬಿಜಾಪುರ ೧೫೨) ಶಾಸನದಲ್ಲಿ ಅಹವಮಲ್ಲದೇವನು ಶಂಕರನಾರಾಯಣ ದೇವರ ಅಂಗಭೋಗಕ್ಕೆ ಹಾಗೂ ತಪೋದನರ ಆಹಾರಕ್ಕೆ ಛಾತ್ರರ ವಿದ್ಯಾ ದಾನಕ್ಕೆ ಬಾವಿ, ಮಾಣಿಕೇಶ್ರವರ ಕೋಲಲ್ಲಿ ಅಳತೆ ಮಾಡಿದ ೨೦೦ ಮತ್ತರು ಭೂಮಿ ಮೊದಲಾದವುಗಳನ್ನು ದಾನ ಮಾಡಿದನೆಂದು ಹೇಳುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿದ ಇನ್ನೊಂದು ವಿಶೇಷವೆಂದರೆ ಅಹವಮಲ್ಲನು ಮಲ್ಲಿಕಾರ್ಜುನ ಪಂಡಿತರ ಶಿಷ್ಯನಾಗಿದ್ದು, ಇವನು ಕಾಳಾಮುಖ ಬ್ರಹ್ಮಚಾರಿ ಎಂದು ಹೇಳಿದೆ. ಈ ಶಾಸನದ ಮೂಲಕ ಶೈವಧರ್ಮದ ಅಂಗವಾದ ಕಾಳಾಮುಖ ಪಂಥವು ಈ ಪ್ರದೇಶದಲ್ಲಿ ಪ್ರಬಲವಾಗಿದ್ದು ತಿಳಿದುಬರುತ್ತದೆ. ಇದೇ ಪ್ರದೇಶದ ಕುಳಗೇರಿ(ಎ.ಆರ್.ಐ.ಇ.

೧೯೯೦–೯೧ ಬಿಜಾಪುರ ೧೫೨) ಕ್ರಿ.ಶ. ೧೦೮೮ರ ಶಾಸನದಲ್ಲಿ ಶ್ರೀಮದಗ್ರಹಾರ ಕುಣಿಲಂಗೆಜೆಯ ಪ್ರಮುಖ ಮಹಾಜನಗಳು ರುದ್ರೇಶ್ರವರ ದೇವರಿಗೆ ಉತ್ತರಾಯಣ ಸಂಕ್ರಮಣದಲ್ಲಿ ಸೊಮಗ್ರಹಣ ನಿಮಿತ್ತವಾಗಿ ದಾನದತ್ತಿಗಳನ್ನು ನೀಡಿರುವುದನ್ನು ತಿಳಿಸುತ್ತದೆ. ಇದೇ ಕುಳಗೇರಿಯ ಮತ್ತೊಂದು ಶಾಸನ(ಎ.ಆರ್.ಐ.ಇ. ೧೯೯೧–೯೨ ಬಿಜಾಪುರ) ದಂಡನಾಯಕ ಮಹಾವಿಷ್ಣು ದೇವರಸನು ಕುಣಿಲಂಗೆಜೆಯ ಹಿರಿಯಸ್ಥಾನದ ಶ್ರೀ ನಾಗರಾಶಿ ಪಂಡಿತರ್ಗ್ಗೆ ಹಾಗೂ ಇಲ್ಲಿನನ ನಾಗೇಶ್ವರ ದೇವರಿಗೆ, ಭೋಗೇಶ್ವರ ದೇವರಿಗೆ ಮತ್ತು ಕಾಮೇಶ್ವರ ದೇವರಿಗೆ ದಾನದತ್ತಿಗಳನ್ನು ನೀಡಿದ ವಿವರವಿದೆ. ಈ ದೇವತೆಗಳ ಹೆಸರುಗಳನ್ನು ಗಮನಿಸಿದರೆ ಇದೊಂದು ತ್ರಿಕೂಟ ಮತ್ತು ತ್ರೈಪುರುಷ ದೇವಾಲಯವೆಂದು ಸ್ಪಷ್ಟವಾಗುತ್ತದೆ.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಜೇವರ್ಗಿ ತಾಲ್ಲೂಕಿನ ವಡಗೇರಿ(ಎ.ಆರ್.ಐ.ಇ. ೧೯೯೦–೯೧ ಬಿಜಾಪುರ ೬೭) ಕ್ರಿ.ಶ. ೧೦೭೭ರ ಶಾಸನದ ಪ್ರಕಾರ ಒಂದು ಪ್ರಮುಖ ಕಾಳಾಮುಖಶೈವ ಗುರುಪರಂಪರೆಯ ಕೇಂದ್ರವಾಗಿತ್ತು ಎಂದು ತಿಳಿಸುತ್ತದೆ. ಈ ಶಾಸನವು... ತ್ರಿಭುವನಮಲ್ಲ ದೇವನ ಪ್ರಥಮ ವರ್ಷದಲ್ಲಿ ಅವನ ಪಟ್ಟ ಬಂಧೋತ್ಸವದ ನಿಮಿತ್ಯವಾಗಿ(ಪಟ್ಟಾಭಿಷೇಕದ ನೆನಪಿಗಾಗಿ) ಹಲವಾರು ಮಹಾದಾನಗಳನ್ನು ಮಾಡಿದ ವಿವರಗಳನ್ನು ಹೇಳುತ್ತದೆ. ಫ್ರಭುವನಮಲ್ಲದೇವನ ಮಾಂಡಳಿಕನಾಗಿದ್ದ ದಾಯಿಮಯ್ಯನ ಬಿನ್ನಪದಿಂದ ವಡಂಗೆಜೆರಯಲ್ಲಿ ಶ್ರೀ ದಾಯಿಮೇಶ್ವರ ದೇವರನ್ನು ಪ್ರತಿಷ್ಠಾಪಿಸಿ ನಂದಾದೀಪ, ನೈವೇದ್ಯ ಅರ್ಚನೆ, ಜೀರ್ಣೋದ್ಧಾರಕ್ಕಾಗಿ ಪಾವಳಿ ವರ್ಗಕ್ಕೆ, ಮಠದಲ್ಲಿ ಓದುವ ವಿದ್ಯಾರ್ಥಿಗಳಿಗೆ, ತಪೋದನರಿಗೆ ಆಹಾರ ಧಾನ್ಯಗಳಿಗಾಗಿ ಚೈತ್ರ ಪವಿತ್ರದ ಸರ್ವ ಪೂಜೆಗಳಿಗಾಗಿ ಸರ್ವಬಾಧ ಪರಿಹಾರವಾಗಿ ಹಲವಾರು ದಾನದತ್ತಿಗಳನ್ನು ನೀಡಿದರೆಂದು ಹೇಳಿದೆ. ಈ ದಾನವನ್ನು ಎಳಮಲೆಯ ಸಿಂಹಪರಿಷತ್ ಮಂಡಳಿಯ ಮಲಯಾಳ ಪಂಡಿತ ದೇವರ ಪ್ರಶಿಷ್ಯರಾದ ಎಳರಾವೆಯ(ಯಡ್ರಾಮಿ) ಸೂರ್ಯರಾಶಿ ಪಂಡಿತ ಪ್ರಶಿಷ್ಯ ಶ್ರೀಮಾನ್ ಮಹೇಶ್ವರ ಪಂಡಿತರಿಗೆ ದಾನ ನೀಡಿದರು ಎಂದು ತಿಳಿಸುತ್ತದೆ. ಈ ಎಳರಾವೆ ಸಿಂಹಪರಿಷತ್ ಮಂಡಳಿಯು ಒಂದು ಕಾಳಮುಖ ಶೈವ ಪಂಥದ ಪ್ರಮುಖ ಕೇಂದ್ರವಾಗಿತ್ತು.

ಕಲ್ಯಾಣ ಚಾಳುಕ್ಯರ ಆಡಳಿತದವಧಿಯಲ್ಲಿ, ಶೈವ ಭಕ್ತರು ಶಿವನ ಅರಾಧಕರಾಗಿ ಅತ್ಯಂತ ಗಟ್ಟಿ ನಂಬಿಕೆಗಳನ್ನು ಹೊಂದಿದ್ದರು. ಶಿವದೇವಾಲಯಗಳಿಗೆ ಯಾವುದೇ ರೀತಿಯ ತೊಂದರೆಗಳು ಉಂಟಾದದಲ್ಲಿ ತಮ್ಮ ಪ್ರಾಣವನ್ನುಉ ನೀಡಿದಂತಹ ಉಲ್ಲೇಖಗಳು ಇವೆ. ಇದು ಅವರ ಧಾರ್ಮಿಕ ನಂಬಿಕೆಗಳಿಗೆ ದಾಖಲೆಯಾಗಿದೆ. ಶಿವಾಲಯವನ್ನು ಅಳಿಯಲು ಧರ್ಮನಿಮಿತ್ತವಾಗಿ ಗಂಗರಾಸಿಜೀಯ ಎಂಬವರು ಅಧಿಕಾರಿಯನ್ನು ಕೊಂದು ತಾನು ಸಾಯಲು ಅವನ ಮಗ ಸಿಂಗರಾಸಿ ಅತ್ತಿಮಬ್ಬೆ ಚಂದಿಯಕ್ಕನು ಕ್ಷಮೆಯನ್ನು ಕೊಡಲು ಸಿಂಗರಾಸಿಗೆ ಜೀವನ ನಿರ್ವಹಣೆಗಾಗಿ ದಾನವನ್ನು ನೀಡಿದರು ಎಂದು ಮಣಿಯೂರಿನ(ಎ.ಆರ್.ಐ.ಇ. ೧೯೫೪–೫೫ ಬಿಜಾಪುರ ೧೨೬) ಶಾಸನವು ತಿಳಿಸುತ್ತದೆ. ಗಂಗಾರಾಸಿಜೀಯನು ಮಣಿಯೂರಿನ ಶಿವಾಲಯದೊಂದಿಗೆ ಭಾವನಾತ್ಮಕ ಸಂಬಂಧಗಳನ್ನು ಹೊಂದಿದ್ದು, ಅದು ಅಳಿದಾಗ ಅಧಿಕಾರಿಯನ್ನು ಕೊಂದು ತಾನು ಕೂಡ ಪ್ರಾಣತೆತ್ತುದು ತಿಳಿದಬರುತ್ತದೆ. ಇದರಿಂದ ಅವರ ಧಾರ್ಮಿಕ ನಿಷ್ಠೆಯು ಕೂಡ ಸ್ಪಷ್ಟವಾಗುತ್ತದೆ. ಇದೇ ತಾಲ್ಲೂಕಿನ ನಿಂಬರಗಿಯ(ಕಲಬುರ್ಗಿ ಜಿಲ್ಲೆಯ ಶಾಸನಗಳು, ಪುಟ ೫೪) ಶಾಸನದಲ್ಲಿ ಶ್ರೀಸ್ವಯಂಭು ಕೋಟಿಶಂಕರ ದೇವಸ್ಥಾನ ಮತ್ತು ಮಠದ ಉಲ್ಲೇಖವಾಗಿದೆ.

ಕಲ್ಯಾಣ ಚಾಳುಕ್ಯರ ಇತಿಹಾಸದಲ್ಲಿ ಧರ್ಮಶಾಸ್ತ್ರ ಕೃತಿ ಮಿತಾಕ್ಷರದಿಂದ (ಯಾಜ್ಞವಲ್ಕ್ಯ ಸ್ಮೃತಿಯ ವ್ಯಾಖ್ಯಾನ) ಅಜರಾಮರವಗಿರುವ ಮರ್ತೂರು(ಎ.ಆರ್.ಐ.ಇ. ೧೯೫೯–೬೦ ಬಿಜಾಪುರ ೪೫೨; ಮಿತಾಕ್ಷರದ ವಿಜ್ಞಾನೇಶ್ವರರು ಮರ್ತೂರು) ಎಂಬ ಪ್ರದೇಶವು ಒಂದು ವೈದಿಕಶೈವ ಕೇಂದ್ರವಾಗಿರುವದರ ಬಗ್ಗೆ ತಿಳಿದುಬರುತ್ತದೆ. ಇಲ್ಲಿ ವಿಜ್ಞಾನೇಶ್ವರನು ಶೈವ ಧರ್ಮವನ್ನು ಪರಿಪಾಲಿಸತ್ತಿದ್ದ. ಮರ್ತೂರಿನಲ್ಲಿ ಪೆರ್ಗ್ಗಡೆ ಬೀಚಿರಾಜನು ಸ್ಥಾಪನೆ ಮಾಡಿಸಿದ ಮಹಾದೇವರ ದೇವಸ್ಥಾನ ಹಾಗೂ ಕೇಶವ ದೇವರ ದೇವಸ್ಥಾನಗಳಲಿಗೆ, ಸೂರ್ಯಗ್ರಹಣದ ನಿಮಿತ್ತವಾಗಿ ಬಚ್ಚೇಶ್ವರ ದೇವರಿಗೆ ಹಾಗೂ ಇಲ್ಲಿ ಸೂರ್ಯದೇವರಿಗೆ ದಾನದತ್ತಿಗಳನ್ನು ನೀಡಿದ ಉಲ್ಲೇಖಗಳಿವೆ. ಕ್ರಿ.ಶ. ೧೯೪ರ ನಾಗಾಯಿ(ಹೈದರಾಬಾದ್ ಆರ್ಕಿಯಾಲಜಿಕಲ್ ಸಿರಿಸ್–೮) ಶಾಸನದಲ್ಲಿ ರಾಮತೀರ್ಥಧ ರಾಮೇಶ್ವರ ದೇವರನ್ನು, ಗಣಪತಿಯನನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ. ಇದೇ ಶಾಸನದಲ್ಲಿ ನಾಗಾಯಿ ಸಿದ್ದೇಶ್ವರ ದೇವರ ಲೋಕೇಶ್ವರ ದೇವರ ದೇವಾಲಯಗಳ ಉಲ್ಲೇಖಗಳು ಕಂಡುಬರುತ್ತವೆ. ಇದೇ ಭಾದ ಕ್ರಿ.ಶ. ೧೧೧೮ರ ಹಂದರಕಿ(ಎ.ಆರ್.ಐ.ಇ. ೧೯೭೬–೭೭ ಬಿಜಾಪುರ ೧೪೦) ಶಾಸನದಲ್ಲಿ ಅಘೋರಶಕ್ತಿ ಪಂಡಿತರ ಹೆಸರು ಉಲ್ಲೇಖಗೊಂಡಿದೆ.

ಜೀವರ್ಗಿಯ ಅಂಕಲಗಿಯ(ಎ.ಆರ್.ಐ.ಇ. ೧೯೯೦–೯೧ ಬಿಜಾಪುರ ೧೦೬) ಕ್ರಿ.ಶ. ೧೦೭೭ರ ಶಾಸನವು ಕಾಳಾಮುಖ ಶೈವ ಗುರುಗಳ ವಿವರವನ್ನು ನೀಡುತ್ತದೆ. ಶ್ರೀಮತು ಚಟ್ಟೆಯ ಷಳಂಗಿಯರ ಸುಪುತ್ರ ತ್ರಿವಿಕ್ರಮ ಷಳಂಗಿಯ ಮತ್ತು ಶ್ರೀ ರುದ್ರ ಭಟ್ಟೋಪಾಧ್ಯಾಯ ಹೆಸರುಗಳನ್ನು ಉಲ್ಲೇಖಿಸುತ್ತದೆ. ಇವರ ಕಾಲಘಟ್ಟದಲ್ಲಿ ಸಮಾನ್ಯವಾಗಿ ಕರ್ನಾಟಕದ ಉತ್ತರದ ಭಾಗವು ಶೈವ ಧರ್ಮದ ಪ್ರವರ್ಧಮಾನ ಕೇಂದ್ರವಾಗಿತ್ತು. ಈ ಭಾಗದಲ್ಲಿ ಹಲವಾರು ಶೈವ ದೇವಾಲಯಗಳು ನಿರ್ಮಾಣಗೊಂಡಿವೆ. ಕ್ರಿ.ಶ. ೧೦೮೨ರ ಹೊಳಗುಂಡಿ(ಎ.ಆರ್.ಐ.ಇ. ೧೯೪ ಬಿಜಾಪುರ ೫೭)ಯ ಶಾಸನದಲ್ಲಿ ಮಹಾಮಂಡಳೇಶ್ವರ ಗಂಗರಸನ ಮಗ ಮಹಾಸಾಮಂತ ಚಾಮುಂಡ ಅರಸನು ಎರಿಕಗಾವುಂಡನ ತಂದೆ ಹೊಳಗುಂಡಿಯಲ್ಲಿ ಶ್ರೀ ಬಾಚೇಶ್ವರ ದೇವಾಲಯ ನಿರ್ಮಿಸಿ, ಭೂಮಿಯನ್ನು ದಾನ ಮಾಡಿದ ಬಗ್ಗೆ ವಿವರಿಸುತ್ತದೆ. ಜೊತೆಗೆ ಕಾಳೇಶ್ವರ ಪಂಡಿತ ದೇವರಿಗೆ ಹಲವು ದಾನಗಳನ್ನು ಮಾಡಿದ ಬಗೆಗೆ ಬೆಳಕು ಚೆಲ್ಲುತ್ತದೆ.

ಸಾಮಾನ್ಯವಾಗಿ ಇವರ ಕಾಲದ ಶಾಸನಗಳನ್ನು ಗಮನಿಸಿದಾಗ ದೇವಾಲಯಗಳು, ಮಹಾಮಂಡೇಳಶ್ವರರ ಅಥವಾ ದೇವಾಲಯ ನಿರ್ಮಿಸಿದ ಅಧಿಕಾರಿಗಳ ಹೆಸರಿನಿಂದಲೇ ದೇವಸ್ಥಾನ ಮೂಲದೇವರನ್ನು ಹೆಸರಿಸಿರುವುದು ವಿಶೇಷವಾಗಿದೆ. ಕ್ರಿ.ಶ. ೧೧೧೩ರ ಹರಪನಹಳ್ಳಿ ತಾಲ್ಲೂಕಿನ ಬಾಗಳಿ(ಎಸ್.ಐ.ಐ. ಸಂಪುಟ ೯ ಭಾಗ–೧ ಶಾ.ಸಂ. ೧೮೯) ವಿಕ್ರಮಾದಿತ್ಯನ ಸಾಮಂತನಾದ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿಯನ್ನು ಆಳುತ್ತಿದ್ದ ಸಂದರ್ಭದಲ್ಲಿ ಮಹಾಮಲೆಯಾಳ ವಡ್ಡ ವ್ಯವಹಾರಿ ಪೂನ್ಮೂರ್ಖಶೆಟ್ಟಿಯು ಇಲ್ಲಿನ ಬಾಗಳಿಯ ಶೈವ ಗುರುಗಳಾದ ಶಿವಶಕ್ತಿ ಪಂಡಿತರಿಗೆ ಹಲವು ಗದ್ಯಾಣಗಳನ್ನು ಮತ್ತು ಇಲ್ಲಿನ ಕಲಿದೇವರಿಗೆ ನಂದಾದೀಪವನ್ನು ದಾನ ಮಾಡಿರುವುದನ್ನು ವಿವರಿಸುತ್ತದೆ. ಉತ್ತರಕನ್ನಡ ಜಿಲ್ಲೆಯ ಅಗ್ಗೆರೆಯ(ಕೆ.ಆರ್.ಐ. ಸಂಪುಟ ೫, ಶಾ.ಸಂ. ೧೩) ಕ್ರಿ.ಶ. ೧೯೫ರ ಶಾಸನದಲ್ಲಿ ಕುಪ್ಪಗಾವುಂಡ ಮತ್ತು ಅವನ ಹೆಂಡತಿ ನಾಗಿಯಬ್ಬೆ ಮತ್ತು ಜಕ್ಕಗಾವುಂಡನು ಶಿವದೇವಾಲಯವೊಂದನ್ನು ಕಟ್ಟಿಸಿ ಅದಕ್ಕೆ ಹಾಗೂ ಅಲ್ಲಿನ ಸ್ಥಾನಪತಿಗಳಾದ ಜನ್ನಯಗಾಳಯ ಶಿಷ್ಯ ಜಕ್ಕಯ್ಯ ಮತ್ತು ಜೀಯರಿಗೆ ದಾನದತ್ತಿಗಳನ್ನು ನೀಡಿದನೆಂದು ವಿವರಿಸುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಪ್ರವರ್ಧಮಾನಕ್ಕೆ ಬಂದಿದ್ದ ಇಂದಿನ ಆಂಧ್ರಪ್ರದೇಶದ ಶ್ರೀಶೈಲ, ಕುಡುವೇಳಿಸಂಗಮ, ಅಲಂಪುರ,

ಮಹಾನಂದಿ ಮೊದಲಾದ್ರ ಪ್ರಮುಖ ಶೈವ ಕ್ಷೇತ್ರಗಳು ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೂ ಪೂಜೆ ಪುನಸ್ಕಾರಗಳಿಗೆ, ಧಾರ್ಮಿಕ ಚಟುವಟಿಕೆಗಳಿಗೆ ಆಸ್ಥೆಯನ್ನು ತೋರಿಸಲಾಗುತ್ತಿತ್ತು. ಕ್ರಿ.ಶ. ೧೧೦೭ರ ಅಲಂಪುರ(ಕೆ.ಇ. ಆಂದ್ರ ಭಾಗ–೧, ಶಾ.ಸಂ. ೮೭) ಶಾಸನವು, ಅಲಂಪುರ ಬ್ರಹ್ಮೇಶ್ವರ ದೇವಾಲಯವು ಶ್ರೀಪರ್ವತದ ಪಶ್ಚಿಮ ಬಾಗಿಲದಂತೆ ಎಂದು ಹೇಳುತ್ತಾ, ವಿಕ್ರಮಾದಿತ್ಯನ ಪಟ್ಟದ ರಾಣಿಯರಲ್ಲಿ ಒಬ್ಬಳಾದ ಅಭಿನವ ಸರಸ್ವತಿ ಚಂದಲದೇವಿಯು ಆ ದೇವಾಲಯದ ಸ್ಥಾನಪತಿಯಾದ ಧರಣೇಂದ್ರರಾಶಿ ಪಂಡಿತರಿಗೆ ದಾನದತ್ತಿಗಳನ್ನು ನೀಡಿದರ ಬಗ್ಗೆ ಬೆಳಕು ಚೆಲ್ಲುತ್ತದೆ. ಮೇದಕ್ ಜಿಲ್ಲೆಯ ಅಲ್ಲಾದುರ್ಗದ(ಎ.ಆರ್.ಐ.ಇ. ೧೯೯೧–೯೨) ಶಾಸನದಲ್ಲಿ ನೇರಳಕೇರಿಯಲ್ಲಿ ಚಲ್ಲೇಶ್ವರ ದೇವಾಲಯವನ್ನು ನಿರ್ಮಿಸಿ, ಅದರ ದೈನಂದಿನ ಚಟುವಟಿಕೆಗಳಿಗೆ ಹಲವು ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದರ ಬಗ್ಗೆ ವಿವರಿಸುತ್ತದೆ. ಹಾಗೆಯೇ, ಗೂಡೂರಿನ(ಆಂಧ್ರಪ್ರದೇಶ ಆರ್ಕಿ. ಸೀರಿಸ್ ಸಂಪುಟ ೩, ಶಾ.ಸಂ. ೪೨) ಶಾಸನದಲ್ಲಿ ಮಲ್ಲೇಶ್ವರ ದೇವರ ಉಲ್ಲೇಖ ಬರುತ್ತದೆ. ಕೊಳನುಪಾಕ(ಆಂಧ್ರಪ್ರದೇಶ ಆರ್ಕಿ. ಸೀರಿಸ್ ಸಂಪುಟ ೩, ಶಾ.ಸಂ. ೪೭) ಶಾಸನದಲ್ಲಿ ಸ್ವಯಂಭು ಸೋಮೇಶ್ವರ ದೇವಸ್ಥಾನವಿದ್ದುದು ಹಾಗೂ ಇಲ್ಲಿನ ಮತ್ತೊಂದು ಶಾಸನದಲ್ಲಿ(ಆಂಧ್ರಪ್ರದೇಶ ಆರ್ಕಿ. ಸೀರಿಸ್ ಸಂಪುಟ ೩, ಶಾ.ಸಂ. ೪೮) ಕಾಳಾಮುಖಕುಲತಿಲಕರಂತಿರುವ ಶ್ರೀ ರಾಮೇಶ್ವರ ಪಣ್ಡಿತದೇವರ ಶಿಷ್ಯರ್ದೇವಬಕ್ತಿಪಣ್ಡಿತ ಇವುರ ಯಮನಿಯಮಸ್ವಾಧ್ವಾಯಧ್ಯಾನ ಮೊದಲಾದ ಧಾರ್ಮಿಕ ವಿಧಿವಿಧಾನಗಳನ್ನು ಮಾಡಿಕೊಂಡಿರುವುದಕ್ಕಾಗಿ ಹಾಗೂ ಶಾಸನದಲ್ಲಿ ಉಲ್ಲೇಖಿತ ಶ್ರೀಮತ್ಕೇದಾರಪಂಡಿತರವರ ಶಿಷ್ಯರಾದ ರಾಮೇಶ್ವರ ಪಂಡಿತರಿಗೆ ಹಾಗೂ ಶ್ರೀಮದುತ್ತರೇಶ್ವರ ದೇವರಿಗೆ ಸರ್ವನಮಸ್ಯವಾಗಿ ಭೂಮಿಯನ್ನು ದಾನವಾಗಿ ಕೊಟ್ಟಿರುವುದರ ಮೇಲೆ ಬೆಳಕು ಚೆಲ್ಲುತ್ತದೆ.

ಆರನೆಯ ವಿಕ್ರಮಾದಿತ್ಯನ ಕಾಲದ ಧಾರ್ಮಿಕ ವಿವರಗಳನ್ನು ಮುನಿರಾಬಾದನ(ಆಂಧ್ರಪ್ರದೇಶ ಆರ್ಕಿ. ಸೀರಿಸ್ ಸಂಪುಟ ೩, ಶಾ.ಸಂ. ೧೩) ಶಾಸನವು ಬೆಳಕು ಚೆಲ್ಲುತ್ತದೆ. ಶ್ರೀ ಸೊಮೇಶ್ವರ ದೇವರ ಪ್ರತಿಷ್ಠೆಯ ಬಗ್ಗೆ ವಿವರಿಸುತ್ತದೆ. ಕ್ರಿ.ಶ. ೧೯೯೯ರ ಗಣೇಶವಾಡಿ(ಎ.ಆರ್.ಐ.ಇ. ೧೯೭೪–೭೫, ೩೫೪) ಶಾಸನವು ಭೀಮ ಸಮುದ್ರದ ದಂಡೆಯ ಮೇಲೆ ತ್ರಿಕೂಟೇಶ್ವರ ದೇವಾಲಯವನ್ನು ನಿರ್ಮಿಸಿದ್ದರ ಬಗ್ಗೆ ಹೇಳುತ್ತದೆ. ಕ್ರಿ.ಶ. ೧೧೦೩ರ ಹೊಸೂರಿನ ಶ್ರೀ ಮಾರುತೇಶ್ವರ ದೇವಾಲಯ ಕಟ್ಟಲು ಮಹಾಪ್ರಭು ನಾಕಗಾವುಮಡನು ದಾನದತ್ತಿಗಳನ್ನು ನೀಡಿದನು ಎಂದು ಸೂಚಿಸುತ್ತದೆ. ಕ್ರಿ.ಶ. ೧೧೨೨ರ ಕುದ್ರಿಯ(ಎ.ಆರ್.ಐ.ಇ. ೧೯೭೧–೭೨, ೫೭೨) ಶಾಸನವು ಮಹಾಮಂಡಳೇಶ್ವರ ನಿಂಬಯ್ಯನು ನಿಂಬೇಶ್ವರ ದೇವಾಲಯ ನಿರ್ಮಿಸಿದರ ಬಗ್ಗೆ ಹೇಳಿದೆ. ಇವರ ಕಾಲದಲ್ಲಿ ಕ್ರಿ.ಶ. ೧೦೮೦ರ ಗಳಗನಾಥ(ಎಸ್.ಐ.ಐ. ಸಂಪುಟ ೧೮, ಶಾ.ಸಂ. ೮೮) ಹಾವೇರಿ ಜಿಲ್ಲೆಯ ತುಂಗಭದ್ರೆಯ ತೀರದಲ್ಲಿ ಪ್ರಮುಖ ಶೈವ ಕೇಂದ್ರವಾಗಿತ್ತು ಎಂಬುದು ತಿಳಿದು ಬರುತ್ತದೆ. ಜೊತೆಗೆ ಇಲ್ಲಿನ ಗಳಗೇಶ್ವರ ದೇವಾಲಯದ ಪೂಜೆಗಳಿಗಾಗಿ ಹಾಗೂ ಭಕ್ತರ, ವಿದ್ಯಾರ್ಥಿಗಳ ಮತ್ತು ಸಂಗೀತ ನೃತ್ಯಗಾರ್ತಿಯರಿಗಾಗಿ ದಾನದತ್ತಿಗಳನ್ನು ನೀಡಿದ ವಿವರವನ್ನು ನೀಡುತ್ತದೆ. ಕ್ರಿ.ಶ, ೧೦೮೩ರ ಬಿಜಾಪುರ(ಎಸ್.ಐ.ಐ. ಸಂಪುಟ ೧೮, ಶಾ.ಸಂ. ೯೧)ದ ಶಾಸನವು ಮಹಾಮಂಡಳೇಶ್ವರನ ಭೀವಣದೇವರು ಸಕಳೇಶ್ವರ ದೇವರನ್ನು ನಿರ್ಮಿಸಿದ ಬಗ್ಗೆ ವಿವರಿಸುತ್ತದೆ. ಕ್ರಿ.ಶ. ೧೦೮೭ರ ಶಾಸನವು ಸವಣೂರಿನ ಹತ್ತಿಮತ್ತೂರು(ಎಸ್.ಐ.ಐ. ಸಂಪುಟ ೧೮, ಶಾ.ಸಂ. ೯೨) ವಡ್ಡರಾವುಳದ ಸುಮಕಾಧೀಶ್ವರ ದಂಡನಾಯಕ ಶಿವರಾಜನು ಭೋಗೇಶ್ವರ ದೇವಾಲಯ, ಕ್ರಿ.ಶ. ೧೦೮೮ರ ಉಕ್ಕುಂದ(ಎಸ್.ಐ.ಐ. ಸಂಪುಟ ೧೮, ಶಾ.ಸಂ. ೯೩)ದಲ್ಲಿ ದಾಸಗಾವುಂಡ ಈಶ್ವರ ದೇವಾಲಯವನ್ನು, ಕ್ರಿ.ಶ. ೧೯೯೩ರ ಬಂಕಾಪುರದ(ಎಸ್.ಐ.ಐ. ಸಂಪುಟ ೧೮, ಶಾ.ಸಂ. ೯೯) ಶಾಸನವು ನಕರೇಶ್ವರ ದೇವಾಲಯದ ನಿರ್ಮಾಣದ ಉಲ್ಲೇದ ಮೇಲೆ ಬೆಳಕು ಚೆಲ್ಲುತ್ತವೆ.

ಕ್ರಿ.ಶ. ೧೦೭೯ರ ಶಾಸನವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬಳ್ಳಿಗಾವೆ(ಕರಡಿಕಲ್ಲು–ಎ.ಆರ್.ಐ.ಇ. ೧೯೫೮–೫೯, ೧೮೭) ಪ್ರಮುಖ ಕಾಳಾಮುಖ ಶೈವತತ್ತ್ವ ಕೇಂದ್ರವಾಗಿತ್ತು. ಕೇದಾರಶಕ್ತಿಪಂಡಿತನ ಪರಂಪರೆಯವನಾದ ಶ್ರೀಕಂಠಪಂಡಿತನು ಸರ್ವವೇದ ಪ್ರವೀಣನಾಗಿದ್ದನು ಹಾಗೂ ಅವನು ಲಾಕುಳ, ಬೌದ್ಧ, ಲೋಕಾಯತ ಮೊದಲಾದ ತತ್ತ್ವಗಳನ್ನು ತಿಳಿದವನಾಗಿದ್ದು ತನ್ನನ್ನು ತಾನೇ ಲಕುಳೇಶ್ವರ ಎಂಬುದಾಗಿಯೂ ಹೇಳಿಕೊಂಡಿರುವುದು ವಿಶೇಷವಾಗಿದೆ. ಕ್ರಿ.ಶ. ೧೯೯೪ರ ಬಳ್ಳಿಗಾವೆ(ಎ.ಕ. ಸಂಪುಟ ೮, ಭಾಗ–೨ ಸಾ. ಶಾ.ಸಂ. ೯೪) ಶಾಸನವು ಇಲ್ಲಿ ಪ್ರಮುಖ ಕಾಳಾಮುಖ ಶೈವ ಕೇಂದ್ರ ಎಂದು ಹೇಳುತ್ತಾ, ಇಲ್ಲಿ ಮುಖ್ಯವಾದ ಘಟಿಕಾಲಯ ವಿದ್ದುದರ ಬಗ್ಗೆ ಬೆಳಕು ಚೆಲ್ಲುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವಧರ್ಮಕ್ಕೆ ನೀಡಿದ ಪ್ರೋತ್ಸಾಹ, ಅದು ಬೆಳೆದ ರೀತಿ, ಮತ್ತು ಶೈವ ದೇವಾಲಯಗಳ ಸಂಖ್ಯೆಯನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಈ ಎಲ್ಲ ಅಂಶಗಳನ್ನು ನೋಡಿದಾಗ ಕಲ್ಯಾಣಚಾಲುಕ್ಯರ ಕಾಲದಲ್ಲಿ ಶೈವ ಧರ್ಮವು ಪ್ರಥಮ ಆದ್ಯತೆಯ ಧರ್ಮವಾಗಿರುವುದರ ಬಗ್ಗೆ ಯಾವ ಅನುಮಾನಗಳು ಇಲ್ಲ. ಇವರ ಕಾಲದಲ್ಲಿ ಹಾಕಿಸಿದ ಬಹುಪಾಲು ಶಾಸನಗಳು ಶೈವ ಧರ್ಮದ ದೇವರುಗಳ ಸ್ಪಷ್ಟ ಉಲ್ಲೇಖವಿದೆ. ಇದರಿಂದ ಅವರ ಧಾರ್ಮಿಕ ಚಟುವಟಿಕೆಗಳ ಒಂದು ಚಿತ್ರಣ ದೊರೆಯುತ್ತದೆ. ಚಾಲುಕ್ಯರ ಅಧಿಕಾರದವಧಿಯಲ್ಲಿ ಶೈವಧರ್ಮವು ಪ್ರಮುಖವಾಗಿದ್ದರು, ಉಳಿದ ಧರ್ಮಗಳಿಗೂ ಪ್ರಾಧಾನ್ಯತೆಯನ್ನು ನೀಡಿರುವುದಕ್ಕೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ. ಬೌದ್ಧ, ಜೈನ, ವೈಷ್ಣವ ಮತಗಳಿಗೆ ಪ್ರತ್ಯೇಕ ಚೈತ್ಯಾಲಯ, ವಿಹಾರಗಳು, ಬಸದಿಗಳನ್ನು ನಿರ್ಮಿಸಿ, ಭೂಮಿಯನ್ನು ದಾನಮಾಡಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ವೈಷ್ಣವ ದೇವಾಲಯಗಳು ಶೈವದೊಂದಿಗೆ ಸೇರ್ಪಡೆಗೊಂಡು, ತ್ರಿಕೂಟೇಶ್ವರ ದೇವಾಲಯದಲ್ಲಿ ಸಮ್ಮಿಳಿತವಾಗಿ ನಡೆದುಕೊಂಡು ಸಾಮಾನ್ಯವಾಗಿ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**

1. Annual Report of Indian Epigraphy
2. Indian Antiquary
3. Inscription in Northern Karnataka and Kolhapur State
4. Hyderabad Archaeological Series
5. Bombay Karnataka Inscriptions
6. Karnataka Inscriptions in Andhra Pradesh
7. Mysore Archaeological Report
8. Epigraphy Karnatica (VII)
9. ಮುಜುಮ್‍ದಾರ ಆರ್.ಸಿ. : ಕಾರ್ಪೋರೇಟ್ ಲೈಫ್ ಇನ್ ಎನ್ಸಿಯಂಟ್ ಇಂಡಿಯಾ, ಕಾಸ್ಮೋ ಪಬ್ಲಿಕೇಷನ್ಸ್, ದೆಹಲಿ–೧೯೯೪
10. ಸೀತಾರಾ ಜಾಗಿರ್‍ದಾರ್ : ಕಲ್ಯಾಣದ ಚಾಲುಕ್ಯರ ಕೆಲವು ಹೊಸ ಸಂಗತಿಗಳು, ಶಾಸನ ಅಧ್ಯಯನ, ಸಂಪುಟ ೨, ಸಂ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
11. ಹನುಮಾಕ್ಷಿ ಗೋಗಿ : ಕಲಬುರ್ಗಿ ಜಿಲ್ಲೆಯ ಶಾಸನಗಳು, ಶಿವಚಂದ್ರ ಪ್ರಕಾಶನ, ನವನಗರ, ಹುಬ್ಬಳ್ಳಿ–೧೯೯೭

12. ನಾಗಯ್ಯ ಜೆ.ಎಂ. : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ರುದ್ರಾಕ್ಷಿಮಠ ಬೆಳಗಾವಿ–೧೯೯೨
13. ಕಲ್ಬುರ್ಗಿ ಎಂ.ಎಂ. : ಧಾರವಾಡ ಜಿಲ್ಲೆಯ ಶಾಸನ ಸೂಚಿ, ಧಾರವಾಡ–೧೯೭೫
14. ಹಿರಿಯಣ್ಣ ಎಂ : ದಿ ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ